**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 1389/2022**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ01**

**ದಿನಾಂಕಃ** 11.11.2024 **ಸಿಡಬ್ಲ್ಯೂ01**

| | |
|---|---|
| ಹೆಸರು | ಬೀರೇಶ್ |
| ತಂದೆಯ ಹೆಸರು | ಸಣ್ಣಕೆಂಚಪ್ಪ |
| ವಯಸ್ಸು | 41 ವರ್ಷ |
| ಉದ್ಯೋಗ | ಎಲೆಕ್ಟ್ರಿಶಿಯನ್ |
| ವಾಸ ಸ್ಥಳ | ಹರಿಹರ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಈಗೆ ಸುಮಾರು 2 ವರ್ಷದ ಹಿಂದೆ ದೊಡ್ಡಿಬೀದಿ, ಹರಿಹರದಲ್ಲಿ ಇರುವ ನಮ್ಮ ಮನೆಯಲ್ಲಿ ಒಂದು ರಾತ್ರಿ ನಾವು ಮನೆಯಲ್ಲಿ ಇಲ್ಲದೇ ಇದ್ದಾಗ ನಮ್ಮ ಮನೆ ಕಳ್ಳತನ ಆಗಿತ್ತು. ಮಾರನೇ ದಿನ ಬೆಳಿಗ್ಗೆ ನಮ್ಮ ಪಕ್ಕದ ಮನೆಯವರು ನೋಡಿ ನಮಗೆ ಕರೆ ಮಾಡಿ ತಿಳಿಸಿರುತ್ತಾರೆ. ಆಗ ಬೆಳಿಗ್ಗೆ 7.00 ಗಂಟೆ ಸುಮಾರು ನಾನು ಠಾಣೆಗೆ ಹೋಗಿ ಮಾಹಿತಿ ತಿಳಿಸಿ, ಮನೆಗೆ ಹೋದೇನು. ನಂತರ ಪೊಲೀಸರು ಬಂದು ಒಳಗೆ ಹೋಗಿ ಪರಿಶೀಲನೆ ಮಾಡಿ, ಪಂಚನಾಮೆ ಜರುಗಿಸಿ, ಸ್ಥಳದಲ್ಲಿ ಬೆರಳು ಮುದ್ರೆಗಳನ್ನು ಪಡೆದುಕೊಂಡು, ಶ್ವಾನದಳದಿಂದಲೂ ಸಹ ಪರಿಶೀಲನೆ ಮಾಡಿರುತ್ತಾರೆ. ನಮ್ಮ ಮನೆಯ ಬೀರುವಿನ ಬೀಗ ಮುರಿದು, ಒಂದು ಬೆಳ್ಳಿಯ ಕಳಸ, ಒಂದು ಜೊತೆ ಬೆಂಡೋಲೆ ಜುಮುಕಿ, ಒಂದು ಉಂಗುರ ಮತ್ತು 5 ಸಾವಿರ ರೂ.ಗಳ ನಗದು ಹಣವನ್ನು ಕಳುವು ಮಾಡಿದ್ದರು. ಈ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿಯು ಗುರುತಿಸಿದ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-2 ನ್ನು ಜರುಗಿಸುವ ಕಾಲಕ್ಕೆ ಕಚ್ಚಾ ನಕಾಶೆಯನ್ನು ಬಿಡಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಕಚ್ಚಾನಕಾಶೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸದರಿ ಕಾಲಕ್ಕೆ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು ಗುರುತಿಸಿದ ಛಾಯಾಚಿತ್ರಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

ಎರಡು ತಿಂಗಳ ತರುವಾಯ ಪೊಲೀಸರು ತಮ್ಮ ಜೊತೆಗೆ ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಬಂದು, ಸದರಿ ವ್ಯಕ್ತಿಯನ್ನು ವಿಚಾರಿಸಲಾಗಿ, ಆ ವ್ಯಕ್ತಿ ನಮ್ಮ ಮನೆಯಲ್ಲಿ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾನೆ. ನಂತರ ನಾವು ನ್ಯಾಯಾಲಯದ ಆದೇಶದ ಮುಖಾಂತರ ನಮ್ಮ ಆಭರಣಗಳನ್ನು

ಬಿಡಿಸಿಕೊಂಡಿರುತ್ತೇವೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೀರಾ ಎಂದರೆ ಸಾಕ್ಷಿಯು ಒಂದೇ ಬಾರಿ ನೋಡಿರುವುದರಿಂದ ಗುರುತಿಸುವುದು ಕಷ್ಟ ಎಂದು ನುಡಿದಿರುತ್ತಾರೆ.

(ಮಾನ್ಯ ಎ ಪಿ ಪಿ ರವರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶವನ್ನು ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ